ತಾಂತ್ರಿಕ ಶಿಕ್ಷಣ ಇಲಾಖೆ.

**ನೆನಪೋಲೆ-3**

ಸಂಖ್ಯೆ:ಬಿಟಿಇ/5/ಇಬಿಎಲ್(3) 2018-19

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ: 25-09-2018.

**ಸು ತ್ತೋ ಲೆ**

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಸರ್ಕಾರಿ, ಅನುದಾನಿತ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರು/ಅರೆಕಾಲಿಕ ಉಪನ್ಯಾಸಕರು, ಇತರೆ ಸಿಬ್ಬಂದಿ/ಅರೆಕಾಲಿಕ ಸಿಬ್ಬಂದಿ ವರ್ಗದವರಿಗೆ ಸಂಭಾವನೆ/ದಿನಭತ್ಯೆ/ ಪ್ರಯಾಣ ಭತ್ಯೆಯ ಬಿಲ್ಲುಗಳನ್ನು ಖಜಾನೆ-2ರ ಮೂಲಕ ಪಾವತಿ ಮಾಡಬೇಕಾಗಿರುವುದರಿಂದ Recipient ID Register ಮಾಡುವ ಬಗ್ಗೆ.

**ಉಲ್ಲೇಖ:1.** ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/5/ಇಬಿಎಲ್(3)2018-19, ದಿನಾಂಕ:02/07/2018.

**2.** ಈ ಕಛೇರಿ ನೆನಪೋಲೆ ಸುತ್ತೋಲೆ ಸಂಖ್ಯೆ:ಬಿಟಿಇ/5/ಇಬಿಎಲ್(3)2018-19 ದಿನಾಂಕ:30-07-2018.

**3.** ಈ ಕಛೇರಿ ನೆನಪೋಲೆ ಸುತ್ತೋಲೆ ಸಂಖ್ಯೆ:ಬಿಟಿಇ/5/ಇಬಿಎಲ್(3)2018-19 ದಿನಾಂಕ:13-08-2018.

-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿನ ಈ ಕಛೇರಿ ಸುತ್ತೋಲೆಗಳ ಕಡೆಗೆ ಗಮನ ಸೆಳೆಯುತ್ತಾ, 2018-19ನೇ ಸಾಲಿನಿಂದ ಸಂಭಾವನೆ/ದಿನಭತ್ಯೆ/ಪ್ರಯಾಣ ಭತ್ಯೆಯ ಬಿಲ್ಲುಗಳನ್ನು ಖಜಾನೆ-2ರ ಮೂಲಕ ಪಾವತಿಸಬೇಕಾಗಿರುವುದರಿಂದ ಪ್ರತಿ ನೌಕರರಿಗೂ Recipient ID ಸೃಜಿಸುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಸರ್ಕಾರಿ, ಅನುದಾನಿತ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಉಪನ್ಯಾಸಕರು/ ಅರೆಕಾಲಿಕ ಉಪನ್ಯಾಸಕರು, ಇತರೆ ಸಿಬ್ಬಂದಿ/ಅರೆಕಾಲಿಕ ಸಿಬ್ಬಂದಿ ವರ್ಗದವರಿಗೂ Recipient ID Registration ಮಾಡಿ, Secandary Registration ಮಾಡಿ ಸಂಭಾವನೆ/ದಿನಭತ್ಯೆಯನ್ನು ಪಾವತಿಸುವ ಸಲುವಾಗಿ ಉಲ್ಲೇಖದಲ್ಲಿನ ಈ ಕಛೇರಿ ಸುತ್ತೋಲೆಯಲ್ಲಿ ತಿಳಿಸಲಾದ ನಿಗದಿತ ನಮೂನೆಯಲ್ಲಿ Excel ಮಾಹಿತಿಯನ್ನು recipientidk2@gmail.com Email ID ವಿಳಾಸಕ್ಕೆ ಕಳುಹಿಸಲು ಸೂಚಿಸಲಾಗಿತ್ತು.

ಆದರೆ ಕೆಲವು ಸಂಸ್ಥೆಯವರು ಮಾತ್ರ Recipient ID Registration ಮಾಡಿ DDO ಗಳು Approval ನೀಡಿರುತ್ತಾರೆ. ಆದರೆ ಈಗಾಗಲೇ ಮೇಲ್ಕಂಡ ಸುತ್ತೋಲೆಗಳನುಸಾರ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಖಾಸಗಿ ಮತ್ತು ಅನುದಾನಿತ ಸಂಸ್ಥೆಯವರು Recipient ID ಸೃಜಿಸಿರುವ ಪ್ರಕ್ರಿಯೆ ಮುಗಿಸಿದ್ದರೂ ಸಹ ಸರ್ಕಾರಿ ಪಾಲಿಟೆಕ್ನಿಕ್‌ಗಳ DDO ಗಳು Approval ನೀಡದೇ ಇರುವುದು ಕಂಡು ಬಂದಿರುತ್ತದೆ. ಇದರಿಂದಾಗಿ ಬಿಲ್ಲುಗಳು ವಿಲೇ ಆಗದೇ ಸ್ಥಗಿತಗೊಂಡಿರುತ್ತವೆ. ಈಗಾಗಲೇ ನೂತನವಾಗಿ ಮಾಡಲಾದ DSC ಹಾಗೂ ನವೀಕರಿಸಲಾದ DSCಗಳನ್ನು ಸಹ ಸಂಬಂಧಪಟ್ಟ ಸಂಸ್ಥೆಗಳಿಗೆ ವಿತರಿಸಲಾಗಿದೆ ಎಂದು ಖಜಾನೆ ಇಲಾಖೆಯವರು ಸೂಚಿಸಿರುತ್ತಾರೆ. DSCಬಂದಿಲ್ಲವೆಂಬ ಕಾರಣವನ್ನಿಟ್ಟು DDO ಗಳು ಖಾಸಗಿ ಮತ್ತು ಅನುದಾನಿತ ಸಂಸ್ಥೆಗಳ Recipient ID ಗಳಿಗೆ Approval ನೀಡದೇ ಇರುವುದು ಕಂಡು ಬಂದಿರುತ್ತದೆ. ಆದ್ದರಿಂದ ಈ ಕೂಡಲೇ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು ತಮ್ಮ ಸಂಸ್ಥೆಗೆ ಟ್ಯಾಗ್ ಮಾಡಲಾದ

ಸಂಸ್ಥೆಗಳ Recipient ID ಗಳಿಗೆ Approval ನೀಡಿ Excel ಮಾಹಿತಿಯನ್ನು recipientidk2@gmail.com Email ID ವಿಳಾಸಕ್ಕೆ ಕಳುಹಿಸಲು ಸೂಚಿಸಲಾಗಿದೆ. (PDF FORMAT ನಲ್ಲಿ ಕಳುಹಿಸತಕ್ಕದ್ದಲ್ಲ.)

ಆದ್ದರಿಂದ, ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು ತಮ್ಮ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳ Recipient ID ಅನ್ನು ಮೇಲ್ಕಂಡ ಸುತ್ತೋಲೆಯಲ್ಲಿನ ಅನುಬಂಧದಲ್ಲಿ ನಮೂದಿಸಲಾದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಅಥವಾ ತಮ್ಮ ಸಂಸ್ಥೆಗೆ ಹತ್ತಿರವಿರುವ ಯಾವುದೇ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ Recipient ID Registration ಕಾರ್ಯ ಮಾಡಿಸಿ DDO ಗಳು Approval ನೀಡಿದ ನಂತರ ಆದಷ್ಟು ಬೇಗ Excel ಮಾಹಿತಿಯನ್ನು recipientidk2@gmail.com ವಿಳಾಸಕ್ಕೆ upload ಮಾಡತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಯಾವುದೇ ಬಿಲ್ಲುಗಳನ್ನು ವಿಲೇ ಮಾಡಲು ಸಾಧ್ಯವಾಗುತ್ತಿಲ್ಲ. ಈಗಾಗಲೇ 2018-19ನೇ ಸಾಲಿನ ಆಯವ್ಯಯದಲ್ಲಿ ಮಂಜೂರಾದ ಅನುದಾನವು ವೆಚ್ಚವಾಗದಿದ್ದಲ್ಲಿ ಮುಂಬರುವ ವರ್ಷಗಳಲ್ಲಿ ಸರ್ಕಾರವು ಅನುದಾನವನ್ನು ಕಡಿತಗೊಳಿಸುವ ಸಂಭವವಿರುತ್ತದೆ. ಆದ್ದರಿಂದ ಕಾಲವಿಳಂಬ ಮಾಡದೇ ಸರ್ಕಾರಿ ಪಾಲಿಟೆಕ್ನಿಕ್‌ಗಳ DDO ಗಳು ತಮ್ಮ ಸಂಸ್ಥೆಗಳಲ್ಲಿ Recipient ID Registration ಪ್ರಕ್ರಿಯೆ ನಡೆಸಲಾದ ನೌಕರರ ಪಟ್ಟಿಗೆ **approval** ನೀಡಿ Excel ಮಾಹಿತಿಯನ್ನು recipientidk2@gmail.com Email ID ವಿಳಾಸಕ್ಕೆ ದಿನಾಂಕ:01-10-2018ರೊಳಗಾಗಿ upload ಮಾಡತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಕಾಲವಿಳಂಬಕ್ಕೆ ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರುಗಳೇ ನೇರ ಹೊಣೆಗಾರರಾಗುತ್ತಾರೆಂದು ಈ ಮೂಲಕ ಸೂಚಿಸಲಾಗಿದೆ.

ಸದರಿ ಪ್ರಕರಣವನ್ನು **ಅತಿ ಜರೂರು** ಎಂದು ಪರಿಗಣಿಸಿ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು ಈ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಬೇಕೆಂದು ಮತ್ತೊಮ್ಮೆ ಈ ಮೂಲಕ ಸೂಚಿಸಲಾಗಿದೆ.

| Name of GPT | Aided/Private Polytechnics | | Name of the Staff | Mobile Number | Recipient ID | Bank account Number | IFSC Code |
|---|---|---|---|---|---|---|---|
| | Name | Code | | | | | |
| | | | | | | | |

ಕಾರ್ಯದರ್ಶಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

**ವಿಶೇಷ ಸೂಚನೆ:**

1. ಸರ್ಕಾರಿ/ಖಾಸಗಿ/ ಅನುದಾನಿತ ಸಂಸ್ಥೆಯಲ್ಲಿ ಪರೀಕ್ಷಾ ಸಂಭಾವನೆ ಪಡೆಯುವ/ಇತರೆ ಸಿಬ್ಬಂದಿ ವರ್ಗದವರು ತಮ್ಮ ಸಂಸ್ಥೆಯಲ್ಲಿ ವೇತನ ಪಡೆಯುತ್ತಿರುವ ಬ್ಯಾಂಕ್ ಅಕೌಂಟ್ ಮಾಹಿತಿಯನ್ನು ನೀಡುವುದು ಸೂಕ್ತವಾಗಿರುತ್ತದೆ. ಪದೇಪದೇ ಬ್ಯಾಂಕ್ ಅಕೌಂಟ್‌ನ್ನು ಬದಲಾವಣೆ ಮಾಡುವುದು ಸಮಂಜಸವಾಗಿರುವುದಿಲ್ಲ. ಇದರಿಂದಾಗಿ ಪದೇಪದೇ **Recipient ID** ಯನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

2. ಖಾಸಗಿ/ ಅನುದಾನಿತ ಸಂಸ್ಥೆಯವರು Recipient ID Registration ಕಾರ್ಯ ನಿರ್ವಹಿಸಲು ತಮ್ಮ ಸಂಸ್ಥೆಯ ವತಿಯಿಂದ ಟೈಪಿಸ್ಟ್ ಅಥವಾ ಕಂಪ್ಯೂಟರ್ ಆಪರೇಟರ್‌ರವರನ್ನು ಕರೆದುಕೊಂಡು ಹೋಗಿ ದಾಖಲಾತಿ ಕಾರ್ಯವನ್ನು ಪೂರ್ಣಗೊಳಿಸಬೇಕೆಂದು ಸೂಚಿಸಲಾಗಿದೆ.

3. ಪ್ರಶ್ನೆ ಪತ್ರಿಕೆಗಳನ್ನು ಸಂರಕ್ಷಿಸುವ ಖಜಾನೆ ಅಧಿಕಾರಿ/ಸಿಬ್ಬಂದಿ ವರ್ಗದವರು, ಪೋಲೀಸ್ ಅಧಿಕಾರಿ / ಸಿಬ್ಬಂದಿ ವರ್ಗದವರು ಸಹ ಸಂಭಾವನೆ ಬಿಲ್ಲಿನಲ್ಲಿ **Recipient ID** ಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದೆಂದು ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರು ಸೂಚಿಸುವುದು. ಈಗಾಗಲೇ ಬಿಲ್ಲುಗಳನ್ನು ಸಲ್ಲಿಸಿದ್ದಲ್ಲಿ ಸದರಿಯವರುಗಳ **Recipient ID** ಪಡೆದು **Secondary Registration**ಗೆ ನಿರ್ದೇಶನಾಲಯಕ್ಕೆ ಕಳುಹಿಸತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಬಿಲ್ಲು ಮಾಡಲು ಸಾಧ್ಯವಾಗುವುದಿಲ್ಲವೆಂದು ಸೂಚಿಸಲಾಗಿದೆ.

ಪ್ರತಿ:

1. ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್ ಪ್ರಾಚಾರ್ಯರಿಗೆ – ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗಕ್ಕೆ ವೆಬ್ ಸೈಟ್‌ನಲ್ಲಿ ಪ್ರಚುರಪಡಿಸಲು.
3. bte links webportalನಲ್ಲಿ ಪ್ರಚುರಪಡಿಸಲು.